# ನಟನೆಯತ್ತ ಸುಷ್ಮಿತಾ ಸೆಳೆತ

**ನೃತ್ಯದ ಮೂಲಕ ದೊರೆತ ನಟನೆಯ ಅವಕಾಶವನ್ನು ಮೆಟ್ಟಿಲಾಗಿಸಿಕೊಂಡಿರುವ ಸುಷ್ಮಿತಾ ಭಟ್, ತೆಲುಗು, ಮಲೆಯಾಳಂ, ತಮಿಳು ಸಿನಿಮಾಗಳಲ್ಲಿಯೂ ಕೆಲಸ ಮಾಡಿದ್ದಾರೆ. ಇದೀಗ 'ಕರಾವಳಿ' ಚಿತ್ರಕ್ಕೆ ಜೊತೆಯಾಗಿದ್ದು, ತಮ್ಮ ಕನಸುಗಳನ್ನು 'ಸುಧಾ'ದೊಂದಿಗೆ ಹಂಚಿಕೊಂಡಿದ್ದಾರೆ.**

**■ ಸುಮಲತಾ ಎನ್.**



ಭರತನಾಟ್ಯ ನೃತ್ಯಕಲೆಯಲ್ಲಿ ತೊಡಗಿದ್ದ ಸುಷ್ಮಿತಾ ಭಟ್ ಅವರಿಗೆ ಆ ನೃತ್ಯ ಪ್ರಕಾರವೇ ಸಿನಿಮಾರಂಗಕ್ಕೆ ಬರಲು ಹಾದಿಯಾಯಿತು. ತೆಲುಗು ಭಾಷೆಯ 'ನಾಟ್ಯಂ' ಸಿನಿಮಾದಲ್ಲಿನ ನೃತ್ಯದ ಭಾಗವಾಗಿದ್ದ ಅವರಿಗೆ ಅದೇ ಸಿನಿಮಾದಲ್ಲಿ ನಟಿಸುವ ಅವಕಾಶ ಅಚಾನಕ್ಕಾಗಿ ದೊರೆತದ್ದು ಅಭಿನಯದತ್ತ ಮನಸ್ಸು ಹೊರಳಲು ಒಂದು ನೆಪವಾಯಿತು.

'ನಾಟ್ಯಂ'ನಲ್ಲಿ ಪುಟ್ಟದೊಂದು ಪಾತ್ರ ನಿರ್ವಹಿಸುತ್ತಿದ್ದಂತೆ ಮತ್ತೊಂದು ಸಿನಿಮಾಗೆ ಅವಕಾಶ ಕೂಡಿಬಂತು. ತೆಲುಗಿನ 'ಲವ್ ಮ್ಯಾರೇಜ್' ಹಾಗೂ ಮಮ್ಮುಟ್ಟಿ ನಟನೆಯ 'ಡಾಮಿನಿಕ್' ಸಿನಿಮಾದಲ್ಲಿ ಕಾಣಿಸಿಕೊಂಡರು. ನಟನೆ ಜೊತೆಜೊತೆಗೆ ಜಾಹೀರಾತುಗಳಲ್ಲೂ ರೂಪದರ್ಶಿಯಾಗಿ ಕೆಲಸ ಮಾಡಿದ್ದು ಅವರಲ್ಲಿನ ಆತ್ಮವಿಶ್ವಾಸವನ್ನು ಉದ್ದೀಪಿಸಿತ್ತು.

ತಮಿಳು, ತೆಲುಗು, ಮಲೆಯಾಳಂ ಭಾಷೆಯ ಸಿನಿಮಾಗಳಲ್ಲಿ ಪೋಷಕ ಪಾತ್ರಗಳಲ್ಲಿ ಕಾಣಿಸಿಕೊಂಡ ಅವರು ಕನ್ನಡದಲ್ಲಿ 'ಚೌಚೌ ಬಾತ್' ಮೂಲಕ ನಾಯಕಿಯಾಗಿ ಪರಿಚಿತರಾಗಿ, 'ಕಲ್ಜಿಗ' ಸಿನಿಮಾಗೂ ಬಣ್ಣ ಹಚ್ಚಿದರು. ಇದೀಗ 'ಕರಾವಳಿ'ಯಲ್ಲಿ 'ಭೂಮಿ'ಯಾಗಿ ಜನರ ಮುಂದೆ ಬರಲು ಸಜ್ಜಾಗಿದ್ದಾರೆ.

ಅಭಿನಯಿಸುವ ಅವಕಾಶ ತನಗೆ ಒಲಿದಿದ್ದು ಆಕಸ್ಮಿಕ ಎನ್ನುವ ಸುಷ್ಮಿತಾ ಅವರಿಗೆ ಭರತನಾಟ್ಯ ಗುರುಗಳೇ ನಟನೆಗೂ ಪ್ರೇರಣೆ. 'ನನ್ನ ಭರತನಾಟ್ಯ ಗುರುಗಳಿಗೆ ರಂಗಭೂಮಿಯ ನಂಟೂ ಇತ್ತು. ನಾಟ್ಯದೊಂದಿಗೆ ನಟನೆಯ ಕುರಿತು ಅವರನ್ನು ನೋಡಿ ಕಲಿತಿದ್ದೆ. ನೃತ್ಯದಲ್ಲಿಯೂ ಅಭಿನಯವಿರುವ ಕಾರಣ ಅಲ್ಲಿಯೂ ನನ್ನ ಕಲಿಕೆ ಸಾಗಿತ್ತು' ಎನ್ನುತ್ತಲೇ ಮೊದಲ ಸಿನಿಮಾ ನೀಡಿದ ಅನುಭವಗಳನ್ನು ಹಂಚಿಕೊಳ್ಳುತ್ತಾರೆ.

''ನಾಟ್ಯಂ' ಸಿನಿಮಾದಲ್ಲಿ ಪುಟ್ಟ ದೃಶ್ಯದಲ್ಲಿ ಕಾಣಿಸಿಕೊಳ್ಳಬೇಕಿತ್ತು. ಅದೊಂದೇ ದೃಶ್ಯಕ್ಕೆ ಹತ್ತು ಹದಿನೈದು ಟೇಕ್ ಆದವು. ನೃತ್ಯ ಹಾಗೂ ನಾಟಕದಲ್ಲಿ ಹೆಚ್ಚು ಎನಿಸುವಷ್ಟೇ ಅಭಿವ್ಯಕ್ತಿಸಬೇಕು. ಆದರೆ ಸಿನಿಮಾ ಹಾಗಲ್ಲ. ಈ ಅರಿವು ಬಂದಿದ್ದು ಮೊದಲ ಬಾರಿ ಕ್ಯಾಮೆರಾ ಮುಂದೆ ನಿಂತಾಗ. ಕ್ರಮೇಣ ಕ್ಯಾಮೆರಾಗೆ ತಕ್ಕಂತೆ ನಟನೆಯನ್ನು ಬ್ಯಾಲೆನ್ಸ್ ಮಾಡಲು ಕಲಿತೆ'' ಎಂದು ನಗುತ್ತಾರೆ.

ಸಿನಿಮಾರಂಗದಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳುವುದು ಬಹು ದೊಡ್ಡ ಸವಾಲು ಎನ್ನುವುದು ಸುಷ್ಮಿತಾ ಅನುಭವದ ಮಾತು. ಈ ಸವಾಲಿನಲ್ಲಿ ಗೆಲ್ಲಲು ಕ್ರಿಯಾಶೀಲತೆ ತೋರಲೇಬೇಕು ಎನ್ನುತ್ತಾರೆ.

'ವಿಭಿನ್ನ ಧಾಟಿಯ ಪಾತ್ರಗಳ ಮೂಲಕ ನನ್ನನ್ನು ನಾನು ಕಂಡುಕೊಳ್ಳಬೇಕು. ನನಗೆ ನಾನೇ ಸವಾಲು ಹಾಕಿಕೊಳ್ಳುವಂಥ ಪಾತ್ರಗಳು ಬೇಕು. ಅಂಥ ಉತ್ಸಾಹ, ಕ್ರಿಯಾಶೀಲತೆ ಎಂದಿಗೂ ನನ್ನ ಹುಡುಕಾಟದಲ್ಲಿರುತ್ತದೆ. ಸೈಕಿಯಾಟ್ರಿಕ್ ಥ್ರಿಲ್ಲರ್, ಹಾರರ್ ಒಟ್ಟಾರೆ ಕುತೂಹಲ ಕೆರಳಿಸುವಂಥ ಸಿನಿಮಾಗಳ ಭಾಗವಾಗಬೇಕು. ಭಾಷೆ ಕಲಿಯಲು ನನಗೆ ಉತ್ಸಾಹವಿರುವುದರಿಂದ ಯಾವುದೇ ಭಾಷೆಯಾದರೂ ಒಳ್ಳೆಯ ಕಥೆಯಿದ್ದರೆ ಸಿನಿಮಾ ಮಾಡಲು ಸೈ. ನನ್ನನ್ನು ನಾನು ತಿದ್ದಿಕೊಳ್ಳಲು, ಉತ್ತಮಪಡಿಸಿಕೊಳ್ಳಲು ಸದಾ ಹಂಬಲಿಸುತ್ತೇನೆ' ಎಂದು ತಮ್ಮ ಅಭಿಲಾಷೆಯನ್ನು ಅಭಿವ್ಯಕ್ತಿಸುತ್ತಾರೆ.

ಸದ್ಯ 'ಕರಾವಳಿ' ಸಿನಿಮಾದ ಭಾಗವಾಗಿರುವುದಕ್ಕೆ ಸಂತೋಷ ವ್ಯಕ್ತಪಡಿಸಿರುವ ಅವರು, 'ರಾಜ್ ಬಿ. ಶೆಟ್ಟಿ ಅವರೊಂದಿಗೆ ಕೆಲಸ ಮಾಡಿದ್ದು ದೊಡ್ಡ ಖುಷಿ. ರಾಜ್ ಅವರಿಂದ ನಟನೆಯ ಬಗ್ಗೆ ತುಂಬಾ ಕಲಿಯಬಹುದು ಎನ್ನುವ ಉದ್ದೇಶದಿಂದ ಸಿನಿಮಾ ಒಪ್ಪಿದೆ. ಚಿತ್ರೀಕರಣ ಮಾಡಿದ್ದು ಕಡಿಮೆ ದಿನಗಳಾದರೂ ಹಲವು ಹೊಸ ವಿಷಯಗಳನ್ನು ಕಲಿತೆ. ರಾಜ್ ಅವರು ಪವರ್ ಹೌಸ್ ಇದ್ದ ಹಾಗೆ' ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

ಸದ್ಯ ತೆಲುಗು ಸಿನಿಮಾವೊಂದರಲ್ಲಿ ನಟಿಸಲೂ ಸಿದ್ಧತೆ ನಡೆಸುತ್ತಿದ್ದಾರೆ. ■